13

# ಹಿಂದೆ, ಮುಂದೆ, ಮಧ್ಯೆ

193

**ಉದ್ದೇಶ** : ನಿರ್ದಿಷ್ಟ ಸಂಖ್ಯೆಯ ಹಿಂದಿನ ಮತ್ತು ಮುಂದಿನ ಸಂಖ್ಯೆಯನ್ನು ಹೇಳುವ ಮತ್ತು ಅನುಕ್ರಮವಾಗಿ ಯಾವುದಾದರೂ 2 ಸಂಖ್ಯೆಗಳಲ್ಲಿ ನಡುವೆ ಇರುವ ಸಂಖ್ಯೆಯನ್ನು ಹೇಳುವ ಮತ್ತು ಬರೆಯುವ ಸಾಮರ್ಥ್ಯ ಬೆಳೆಸುವುದು.

**ಸಾಮಗ್ರಿ** : 1 ರಿಂದ 19ರವರೆಗಿನ ಮಿಂಚು ಪಟ್ಟಿಗಳು.

**ಕಲಿಸುವ ಕ್ರಮ :**

1. ಮಿಂಚು ಪಟ್ಟಿಗಳ ಗುಂಪಿನಿಂದ ಒಂದೊಂದು ಮಿಂಚುಪಟ್ಟಿಯನ್ನು ತೆಗೆದು ಕೊಳ್ಳಲು ವಿದ್ಯಾರ್ಥಿಗಳಿಗೆ ಸೂಚನೆ ನೀಡುವುದು.
2. ತಾವು ತೆಗೆದುಕೊಂಡ ಮಿಂಚುಪಟ್ಟಿಯಲ್ಲಿನ ಸಂಖ್ಯೆಯ ಹಿಂದಿನ ಸಂಖ್ಯೆಯನ್ನು ಮಿಂಚುಪಟ್ಟಿಯ ಗುಂಪಿನಿಂದ ತೆಗೆದು ಸೇರಿಸಲು ಹೇಳುವುದು.
3. ಅಂತೆಯೇ ಮೊದಲು ತೆಗೆದುಕೊಂಡ ಮಿಂಚುಪಟ್ಟಿಯಲ್ಲಿನ ಸಂಖ್ಯೆಯ ಮುಂದಿನ ಸಂಖ್ಯೆಯನ್ನು ಮಿಂಚುಪಟ್ಟಿಯ ಗುಂಪಿನಿಂದ ತೆಗೆದು ಸರಿಯಾದ ಜಾಗದಲ್ಲಿ ಇಡಲು ಹೇಳುವುದು ಮತ್ತು ಬರೆಸುವುದು.

**ಸೂಚನೆ :** ವಿದ್ಯಾರ್ಥಿಯು ತೆಗೆದುಕೊಂಡ ಮಿಂಚುಪಟ್ಟಿಯಲ್ಲಿರುವ ಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಅದರ ಮುಂದಿನ ಮತ್ತು ಹಿಂದಿನ ಸಂಖ್ಯೆಗಳನ್ನು ಮಕ್ಕಳಿಂದ ಹೇಳಿಸುವುದು ಮತ್ತು ಬರೆಸುವುದು.

**ಶಿಕ್ಷಕರ ಗಮನಕ್ಕೆ :** ಮೇಲೆ ನೀಡಿರುವ ಕಲಿಸುವ ಕ್ರಮದಂತೆ ವಿದ್ಯಾರ್ಥಿಗೆ ಅನೇಕ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಮಾಡಿಸಿ ಕಲಿಕಾಂಶ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.

13



# ಆಟ
## ಹಿಂದೆ, ಮುಂದೆ, ಮಧ್ಯೆ

199

**ಸೂಚನೆ :** ಖಾಲಿ ಬಿಟ್ಟಿರುವ ಜಾಗದಲ್ಲಿ ಸರಿಯಾದ ಸಂಖ್ಯೆಯ ಮಿಂಚುಪಟ್ಟಿ ಇಟ್ಟು, ನೋಟ್ ಪುಸ್ತಕದಲ್ಲಿ ಬರೆದು ಶಿಕ್ಷಕರಿಂದ ದೃಢೀಕರಿಸುವುದು.

| | | | | |
|---|---|---|---|---|
| 13 | | | | 15 |
| | | | | |
| 16 | | | | 18 |
| | | | | |
| | | 16 | | |
| | | | | |
| 10 | | | | |
| | | | | |
| | | | | 11 |
| | | | | |

13



# ಮೌಲ್ಯಮಾಪನ

## ಹೆಚ್ಚು, ಕಡಿಮೆ, ಸಮ

**200**

| ಸೂಚನೆ : ಹೆಚ್ಚು ಬೆಲೆಯ ಸಂಖ್ಯೆಗೆ ವೃತ್ತ ಹಾಕಿ | | ಸೂಚನೆ : ಕಡಿಮೆ ಬೆಲೆಯ ಸಂಖ್ಯೆಗೆ ವೃತ್ತ ಹಾಕಿ. | |
|---|---|---|---|
| 10 | 18 | 4 | 15 |
| 9 | 19 | 19 | 12 |
| 15 | 12 | 9 | 17 |
| 16 | 8 | 7 | 18 |
| 11 | 15 | 16 | 11 |
| 9 | 10 | 14 | 13 |
| 7 | 18 | 12 | 15 |
| 5 | 3 | 11 | 19 |
| 17 | 16 | 15 | 16 |
| ಸೂಚನೆ : ಸಮ ಬೆಲೆಯ ಸಂಖ್ಯೆಗೆ ವೃತ್ತ ಹಾಕಿ | | | |
| 15 | 13 | 9 | 9 |
| 18 | 18 | 13 | 15 |
| 11 | 16 | 14 | 14 |
| 17 | 17 | 19 | 15 |

13

# ಮೌಲ್ಯಮಾಪನ

## ಏರಿಕೆ - ಇಳಿಕೆ

201

| ಸೂಚನೆ : ಏರಿಕೆ ಕ್ರಮದಲ್ಲಿ ಬರೆಯರಿ. | | | ಸೂಚನೆ : ಇಳಿಕೆ ಕ್ರಮದಲ್ಲಿ ಬರೆಯಿರಿ. | | |
|---|---|---|---|---|---|
| 13 | 17 | 15 | 8 | 12 | 15 |
| 18 | 13 | 11 | 10 | 8 | 12 |
| 14 | 11 | 17 | 18 | 14 | 15 |
| 6 | 17 | 12 | 18 | 15 | 19 |
| 15 | 19 | 17 | 13 | 17 | 11 |
| 11 | 9 | 15 | 10 | 19 | 15 |
| 19 | 13 | 8 | 14 | 11 | 16 |
| 7 | 17 | 13 | 12 | 7 | 13 |
| 14 | 18 | 13 | 10 | 15 | 12 |
| 18 | 11 | 14 | 13 | 17 | 14 |
| 12 | 18 | 15 | 7 | 6 | 15 |
| 10 | 9 | 12 | 19 | 11 | 15 |
| 13 | 8 | 15 | 11 | 12 | 13 |
| 19 | 18 | 17 | 14 | 15 | 11 |

13



# ಮೌಲ್ಯಮಾಪನ
## ಹಿಂದೆ-ಮುಂದೆ-ಮಧ್ಯೆ

202

**ಸೂಚನೆ :** ನೋಟ್ ಪುಸ್ತಕದಲ್ಲಿ ಈ ಕೆಳಗಿನ ಸಂಖ್ಯೆಗಳನ್ನು ಬರೆದುಕೊಂಡು ಹಿಂದೆ, ಮುಂದೆ, ಮಧ್ಯದ ಸಂಖ್ಯೆಗಳನ್ನು ಭರ್ತಿಮಾಡಿ.

| | | | |
|---|---|---|---|
| 1. | ☐ | 13 | 14 |
| 2. | 11 | ☐ | 13 |
| 3. | 16 | 17 | ☐ |
| 4. | 15 | ☐ | 17 |
| 5. | 10 | ☐ | 12 |
| 6. | ☐ | 16 | 17 |
| 7. | 14 | ☐ | 16 |
| 8. | 17 | 18 | ☐ |
| 9. | 14 | 15 | ☐ |
| 10. | ☐ | 18 | 19 |

14



# ಹಾಡು

## ಸಂಕಲನ (ಮೊತ್ತ 19ಕ್ಕೆ ಮೀರದಂತೆ)

203

**ಸೂಚನೆ :** ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಈ ಹಮಕ್ಕೆ ಬಂದ ಮಗುವಿಗೆ ಹೆಚ್ಚು ಗಮನ ಹರಿಸುತ್ತಾ ಶಿಕ್ಷಕರು ಸರಳ ಅಭಿನಯದ ಮೂಲಕ ಹಾಡನ್ನು ಹೇಳಿಕೊಟ್ಟು ಹೇಳಿಸುವುದು.

ಎರಡಂಕಿಗಳ ಸಂಖ್ಯೆಗಳೆರಡು
ಒಂದು ಹತ್ತಿರ ಸೇರಿದವು
ಕೂಡುವ ಆಟ ಆಡುವ ಬನ್ನಿ
ಎಂದು ಅವುಗಳು ಹೇಳಿದವು

ಬಿಡಿಗಳು ತಾವು ನಿಂತವು ಕೂಡಲೆ
ಬಿಡಿಗಳ ಸರತಿಯು ಸಾಲಲ್ಲಿ
ಹತ್ತುಗಳು ನಿಂತವು ಹಾಗೆಯೆ
ಹತ್ತರ ಸರತಿಯ ಸಾಲಲ್ಲಿ

ಬಿಡಿಗಳು ತಾವು ಒಟ್ಟಿಗೆ ಬೆರೆತು
ಒಂದೇ ಗುಂಪು ಆದವು
ಹತ್ತುಗಳೆಲ್ಲಿ ಒಟ್ಟಿಗೆ ಕಲೆತು
ತಾವು ಒಂದೇ ಆದವು

ಆಧಾರ : ಚುಕ್ಕಿ ಚೆನ್ನ / ಚೆನ್ನಾರ ಚುಕ್ಕಿ

14



# ಸಂಕಲನ
## (ಮೊತ್ತ 19ಕ್ಕೆ ಮೀರದಂತೆ)

**204**

**ಉದ್ದೇಶ** : 1 ರಿಂದ 19ರ ಒಳಗಿನ ಅಂಕಿ ಸಂಖ್ಯೆಗಳ ಸಂಕಲನ. (ಮೊತ್ತ 19ಕ್ಕೆ ಮೀರದಂತೆ)

**ಸಾಮಗ್ರಿ** : ಕಲ್ಲುಗಳು, ಕಡ್ಡಿಗಳು, ರಬ್ಬರ್ ಅಂಕಿ + ಮತ್ತು = ಚಿಹ್ನೆ.

**ಕಲಿಸುವ ಕ್ರಮ :**

1. ಸಣ್ಣ ಕಲ್ಲುಗಳನ್ನು ಬಳಸಿ ಕೂಡುವುದನ್ನು ಕಲಿಸುವುದು.

ಉದಾ : **9** 0 0 0 0 0 0 0 0 0

**+ 5** 0 0 0 0 0

**14** 0 0 0 0

ಕಡ್ಡಿಗಳನ್ನು ಕೂಡಿಸಿ ಹತ್ತರ ಒಂದು ಗುಂಪು ಮತ್ತು ನಾಲ್ಕು ಬಿಡಿಗಳನ್ನು ಮಾಡಿ ಅದರಂತೆ 14 ಎಂದು ಬರೆಯಿಸುವುದು.

2. ಒಂದು ಮಗುವಿಗೆ 4 ಕಲ್ಲುಗಳನ್ನು, ಇಬ್ಬರು ಮಕ್ಕಳಿಗೆ ತಲಾ ಐದೈದು ಕಲ್ಲುಗಳನ್ನು ಕೊಡುವುದು. ತಲಾ ಐದು ಕಲ್ಲುಗಳನ್ನು ಹೊಂದಿರುವ ಇಬ್ಬರು ಮಕ್ಕಳ ಬಳಿ ಇರುವ ಕಲ್ಲುಗಳನ್ನು ಮೊದಲು ಒಟ್ಟು ಮಾಡಿ ಅದರೊಡನೆ ಉಳಿದೊಂದು ಮಗುವಿನ ಬಳಿ ಇರುವ 4 ಕಲ್ಲುಗಳನ್ನು ಸೇರಿಸಿ ಎಣಿಸಿ ಹೇಳುವುದು.

ಉದಾ : **5 + 5 + 4 =**

**5 + 5 = 10**



**10 + 4 = 14**



3. ಹತ್ತರ ಕಟ್ಟು ಮತ್ತು ಬಿಡಿ ಕಡ್ಡಿಗಳನ್ನು ಬಳಸಿಕೊಂಡು ಕೂಡುವುದನ್ನು ಕಲಿಸುವುದು.

ಉದಾ : **12**

**+ 6**

**18**



12 ಕ್ಕೆ 6ನ್ನು ಕೂಡಿಸಿ ಹತ್ತರ ಒಂದು ಗುಂಪು ಮತ್ತು 8 ಬಿಡಿಗಳನ್ನು ಮಾಡಿ ಅದರಂತೆ 18 ಎಂದು ಬರೆಯುವುದು.

14



# ಮೌಖಿಕ ಲೆಕ್ಕಗಳು

## ಸಂಕಲನ

209

**ಸೂಚನೆ :**

★ ಶಿಕ್ಷಕರು ಸೂಚಿಸಿದ ವಿದ್ಯಾರ್ಥಿಯು ಈ ಹಂತಕ್ಕೆ ಬಂದಿರುವ ವಿದ್ಯಾರ್ಥಿಗೆ ಕೆಳಕಾಣಿಸಿದ ಒಂದೊಂದೇ ಪ್ರಶ್ನೆ ಕೇಳಿ ಉತ್ತರ ಪಡೆಯುವುದು.

★ ಉತ್ತರಗಳು ಸರಿ/ತಪ್ಪು ಇದ್ದಾಗ್ಯೂ ಶಿಕ್ಷಕರಿಗೆ ವರದಿ ಮಾಡುವುದು.

1. ಗೌರಿಯ ಬಳಿ 12 ಬಳೆಗಳಿದ್ದವು ಅವಳ ತಂದೆ ಮತ್ತೆ 6 ಬಳೆಗಳನ್ನು ತಂದು ಕೊಟ್ಟರು. ಹಾಗಾದರೆ ಈಗ ಗೌರಯ ಬಳಿ ಇರುವ ಒಟ್ಟು ಬಳೆಗಳೆಷ್ಟು ?

2. ರಾಜುವಿನ ಮನೆಯಲ್ಲಿ 14 ಕುರಿಗಳಿದ್ದವು ಆತನ ತಂದೆ ಸಂತೆಯಿಂದ ಮತ್ತೆ 2 ಕುರಿಗಳನ್ನು ತಂದರು ಈಗ ರಾಜುವಿನ ಮನೆಯಲ್ಲಿರುವ ಒಟ್ಟು ಕುರಿಗಳೆಷ್ಟು ?

3. ಸೋಮುವಿನ ತರಗತಿಯಲ್ಲಿ 15 ಗಂಡು ಮಕ್ಕಳಿದ್ದರು. 3 ಗಂಡು ಮಕ್ಕಳು ತರಗತಿಗೆ ಹೊಸದಾಗಿ ಬಂದರು. ಈಗ ಸೋಮುವಿನ ತರಗತಿಯಲ್ಲಿರುವ ಒಟ್ಟು ಗಂಡು ಮಕ್ಕಳೆಷ್ಟು ?

**ಸೂಚನೆ :** ಇದೇ ರೀತಿ ಸಾಮರ್ಥ್ಯಕ್ಕೆ ತಕ್ಕಂತೆ ಮೌಖಿಕ ಲೆಕ್ಕಗಳನ್ನು ಕೇಳುವುದು.

14 

# ಮೌಲ್ಯಮಾಪನ

## ಸಂಕಲನ

**210**

**ಸೂಚನೆ :** ನೋಟ್ ಪುಸ್ತಕದಲ್ಲಿ ಲೆಕ್ಕಗಳನ್ನು ಬರೆದುಕೊಂಡು ಸಂಕಲನ ಮಾಡಿರಿ.

| | | |
|---|---|---|
| 14<br>+ 4<br>____<br>____ | 13<br>+ 3<br>____<br>____ | 9 + 9 = ☐<br>14 + 2 = ☐ |
| 9<br>+ 9<br>____<br>____ | 11<br>+ 8<br>____<br>____ | 12 + 5 = ☐<br>13 + 3 = ☐ |
| 17<br>+ 2<br>____<br>____ | 12<br>+ 5<br>____<br>____ | 15 + 4 = ☐<br>14 + 1 = ☐ |
| 9<br>+ 6<br>____<br>____ | 15<br>+ 4<br>____<br>____ | 13 + 4 = ☐<br>15 + 2 = ☐ |
| 13<br>+ 2<br>____<br>____ | 12<br>+ 5<br>____<br>____ | 16 + 3 = ☐<br>11 + 6 = ☐ |

15



# ಹಾಡು - ವ್ಯವಕಲನ
## (ವ್ಯತ್ಯಾಸ 19ಕ್ಕೆ ಮೀರದಂತೆ)

211

**ಸೂಚನೆ :** ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ. ಈ ವೃತ್ತಕ್ಕೆ ಬಂದ ಮಗುವಿಗೆ ಹೆಚ್ಚು ಗಮನ ಹರಿಸುತ್ತಾ ಶಿಕ್ಷಕರು ಸರಳ ಅಭಿನಯದ ಮೂಲಕ ಹಾಡನ್ನು ಹೇಳಿಕೊಟ್ಟು ಹೇಳಿಸುವುದು.

ಬನ್ನಿರಿ ಬನ್ನಿರಿ ಕಳೆಯುವ ಆಟ
ಆಡುವ ಈಗ ನಾವುಗಳು
ಎಂದುವು ಹತ್ತಿರ ಹತ್ತಿರ ಬಂದು
ಎರೆಡೆರಡಂಕಿ ಸಂಖ್ಯೆಗಳು

ದೊಡ್ಡವ ಎನ್ನುತ ದೊಡ್ಡದು ತಾನು
ನಿಂತಿತು ಮೇಲಿನ ಸಾಲಲ್ಲಿ
ಚಿಕ್ಕವ ಎನ್ನುವ ಬೇಸರದೊಂದಿಗೆ
ಚಿಕ್ಕದು ಕೆಳಗಿನ ಸಾಲಿನಲ್ಲಿ

ದೊಡ್ಡ ಬಿಡಿಯಲಿ ಚಿಕ್ಕ ಬಿಡಿಯದು
ಕಳೆದು ಕೊಂಡಿತು ತನ್ನನ್ನು
ದೊಡ್ಡ ಹತ್ತರಲಿ ಚಿಕ್ಕ ಹತ್ತದು
ಕಳೆದು ಕೊಂಡಿತು ತನ್ನನ್ನು

ಬಿಡಿಗಳಿಂದಾ ಬಿಡಿಗಳು ಮತ್ತು
ಹತ್ತುಗಳಿಂದಾಹತ್ತು
ಒಂದನ್ನೊಂದು ಕಳೆಯುತ ಹೀಗೆ
ಕಳೆಯುವ ಆಟ ಮುಗಿದಿತ್ತು